## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಇತರರ ವಿರುದ್ಧದ ಆರೋಪಗಳ ಕುರಿತು ಇಲಾಖೆ ವಿಚಾರಣೆ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ – ಆದೇಶ.

ಓದಲಾಗಿದೆ:-1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 51 ಇಎನ್‌ಕ್ಯೂ 2016, ದಿನಾಂಕ 15.06.2016

2. ನಿಬಂಧಕರು, ಕರ್ನಾಟಕ ಲೋಕಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : UPLOK-1/DE/192/2016/ARE-10, ದಿನಾಂಕ 28.10.2017 ಹಾಗೂ ಅದರೊಂದಿಗೆ ವಿಚಾರಣಾ ವರದಿ, ವಿಚಾರಣಾ ವರದಿಯ ಕುರಿತಾಗಿ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಮತ್ತು ಇತರೆ ದಾಖಲೆಗಳು

3. 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ ಗ್ರಾಅಪ 101 ಇಎನ್‌ಕ್ಯೂ 2017, ದಿನಾಂಕ 14.12.2017

4. ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿವರಣೆ ದಿನಾಂಕ 10.01.2018

*****

**ಪ್ರಸ್ತಾವನೆ:**

ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ಶ್ರೀ ಅಮರಪ್ಪ ರಾಮಸ್ವಾಮಿ ಶಹಾಪುರ ಎಂಬುವವರು ಸಲ್ಲಿಸಿದ ದೂರಿನ ಬಗ್ಗೆ ಲೋಕಾಯುಕ್ತ ಕಚೇರಿಯು ತನಿಖೆ ಕೈಗೊಂಡಿದ್ದು ತನಿಖಾ ವರದಿಯಲ್ಲಿ ಕೆಳಕಂಡ ಅಧಿಕಾರಿ / ನೌಕರರು ಯಾದಗಿರಿ ಜಿಲ್ಲೆ ಕೆಂಭಾವಿ ಗ್ರಾಮದಲ್ಲಿ ನಬಾರ್ಡ್ ಯೋಜನೆಯಡಿ ಕೈಗೊಳ್ಳಲಾದ ಸರ್ಕಾರಿ ಪ್ರೌಢಶಾಲೆಯ 5 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಕಳಪೆ ಮಟ್ಟದಾಗಿ ನಿರ್ಮಿಸಿ, ದುರ್ನಡತೆ / ಕರ್ತವ್ಯ ಲೋಪವೆಸಗಿರುವ ಆರೋಪವು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧದ ಆರೋಪದ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಕೋರಿ ಮಾನ್ಯ ಉಪಲೋಕಾಯುಕ್ತ-1ರವರು ದಿನಾಂಕ : 18.05.2016ರಂದು ಲೋಕಾಯುಕ್ತ ಕಾಯ್ದೆ ಕಲಂ 12(3)ರಂತೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದರು :-

1. ಶ್ರೀ ಎಂ.ಆರ್.ಖಂದಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ
2. ಶ್ರೀ ಬಸಯ್ಯ ಹಿರೇಮಠ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ
3. ಶ್ರೀ ಪದ್ಮನಾಭ ಜೋಷಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ

ಸರ್ಕಾರವು ಸದರಿ ವರದಿಯನ್ನು ಪರಿಶೀಲಿಸಿ ಯಾದಗಿರಿ ಜಿಲ್ಲೆ ಕೆಂಭಾವಿ ಗ್ರಾಮದಲ್ಲಿ ನಬಾರ್ಡ್ ಯೋಜನೆಯಡಿ ಕೈಗೊಳ್ಳಲಾದ ಸರ್ಕಾರಿ ಪ್ರೌಢಶಾಲೆಯ 5 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಕಳಪೆ ಮಟ್ಟದಾಗಿ ನಿರ್ಮಿಸಿರುವುದು ಸ್ಪಷ್ಟವಾಗಿದ್ದರಿಂದ ಮೇಲಿನ ಆಪಾದಿತ ಅಧಿಕಾರಿ / ನೌಕರರು ದುರ್ನಡತೆ, ಕರ್ತವ್ಯಲೋಪವೆಸಗಿರುವ ಆರೋಪವು ಮೇಲ್ನೋಟಕ್ಕೆ ಕಂಡುಬಂದ ಹಿನ್ನಲೆಯಲ್ಲಿ ಸದರಿ ಆರೋಪದ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14ಎ ರಡಿ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ 15.06.2016 ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಲಾಗಿತ್ತು.

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ : 28.10.2017ರ ಪತ್ರದೊಂದಿಗೆ ವಿಚಾರಣಾ ವರದಿ ಕುರಿತಾಗಿ ಮಾನ್ಯ ಉಪಲೋಕಾಯುಕ್ತ-1ರ ಶಿಫಾರಸ್ಸು ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ವಿಚಾರಣಾಧಿಕಾರಿಯವರು ಮೇಲಿನ ಆಪಾದಿತ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳ ಕುರಿತು ಶಿಸ್ತು ಪ್ರಾಧಿಕಾರದ ಪರವಾಗಿ ಇಬ್ಬರ ಸಾಕ್ಷಿ ಹಾಗೂ 19 ದಾಖಲೆಗಳು ಹಾಗೂ ಆಪಾದಿತರ ಪರವಾಗಿ ಆಪಾದಿತರ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ, ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಮೇಲಿನ ಆರೋಪಿತರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಮಾನ್ಯ ಉಪಲೋಕಾಯುಕ್ತ-1 ರವರು ವಿಚಾರಣಾಕಾರಿಯವರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಗಣಿಸಿ ಆರೋಪವು ಸಾಬೀತಾಗಿರುತ್ತದೆಂದು ನಿರ್ಣಯಕ್ಕೆ ಬಂದಿರುತ್ತಾರೆಂದು ತಿಳಿಸಿ, ಸಾಬೀತಾದ ಆರೋಪಕ್ಕೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ಇಲಾಖಾ ವಿಚಾರಣೆಯಲ್ಲಿ ಮೇಲಿನ ಆಪಾದಿತ ಅಧಿಕಾರಿ / ನೌಕರರ ವಿರುದ್ಧದ ಆರೋಪವು ಸಾಬೀತಾಗಿರುವುದರಿಂದ ಸದರಿ ಆರೋಪಿತರ ಪೈಕಿ ಶ್ರೀ ಎಂ.ಆರ್.ಖಂದಾರೆ, ಕಾರ್ಯಪಾಲಕ ಇಂಜಿನಿಯರ್ ಹಾಗೂ ಶ್ರೀ ಪದ್ಮನಾಭ ಜೋಷಿ, ಕಿರಿಯ ಇಂಜಿನಿಯರ್ ಇವರುಗಳು ಮೂಲತಃ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸೇರಿದವರಾಗಿದ್ದರಿಂದ, ಸದರಿಯವರುಗಳಿಗೆ ಸಂಬಂಧಿಸಿದಂತೆ ದಂಡನೆ ವಿಧಿಸುವ ಪ್ರಸ್ತಾವನೆಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ದಿನಾಂಕ : 14.12.2017ರಂದು ಅವರುಗಳ ಮಾತೃ ಇಲಾಖೆಗೆ ಕಳುಹಿಸಲಾಗಿದೆ. ಇನ್ನುಳಿದಂತೆ ಈ ಇಲಾಖೆಗೆ ಸೇರಿದ ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧದ ಆರೋಪದ ಕುರಿತಂತೆ ವಿಚಾರಣಾ ವರದಿಯನ್ನು ಆಧರಿಸಿ, ಮುಂದಿನ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿ ಆಪಾದಿತ ಅಧಿಕಾರಿಗೆ ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ-1ರವರ ಶಿಫಾರಸ್ಸು ಪ್ರತಿಗಳನ್ನು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ 14.12.2017ರ 2ನೇ ಕಾರಣ ಕೇಳುವ ನೋಟೀಸ್‌ನೊಂದಿಗೆ ಜಾರಿ ಮಾಡಿ ದೋಷಾರೋಪಣಾ ಪಟ್ಟಿ ತಲುಪಿದ 15 ದಿನಗಳ ಒಳಗಾಗಿ ಲಿಖಿತ ವಿರಣೆ ಸಲ್ಲಿಸಲು ಸೂಚಿಸಲಾಗಿತ್ತು.

ಪ್ರತಿಯಾಗಿ ಆಪಾದಿತ ಅಧಿಕಾರಿ ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ 10.01.2018ರಂದು ಸಲ್ಲಿಸಿರುವ ಲಿಖಿತ ವಿವರಣೆಯಲ್ಲಿ ಯಾದಗಿರಿ ಜಿಲ್ಲೆ ಕೆಂಭಾವಿ ಗ್ರಾಮದಲ್ಲಿ ನಬಾರ್ಡ್ ಯೋಜನೆಯಡಿ ಕೈಗೊಳ್ಳಲಾದ ಸರ್ಕಾರಿ ಪ್ರೌಢಶಾಲೆಯ 5 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು 2009ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದ್ದು, ತಾವು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ ಇಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಪ್ರಭಾರವನ್ನು ದಿನಾಂಕ : 03.11.2012ರಂದು ವಹಿಸಿಕೊಂಡಿರುವುದರಿಂದ ಸದರಿ ಪ್ರಕರಣಕ್ಕೂ ತಮಗೂ ಯಾವುದೇ ಸಂಬಂಧ ಇರುವುದಿಲ್ಲ. ಸರ್ಕಾರಿ ಪ್ರೌಢಶಾಲೆ ಕೊಠಡಿಗಳ ಗೋಡೆಗಳು ಅಲ್ಲಲ್ಲಿ ಬಿರುಕು ಬಿಟ್ಟಿರುವುದು, ಪ್ಲಾಸ್ಟರಿಂಗ್ ಸರಿಯಾಗಿ ಮಾಡದಿರುವುದು ಕಂಡು ಬಂದಿದ್ದು ಇದಕ್ಕೆ ಸರಿಯಾಗಿ ವಾಟರ್ ಪ್ರೂಫಿಂಗ್ (ಜಲ ನಿರೋಧಕ) ಮಾಡದಿರುವುದು ಕಾರಣವಾಗಿರುತ್ತದೆಂದು. ಸದರಿ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ವಾಟರ್ ಪ್ರೂಫಿಂಗ್ ಸೇರಿಸಿರುವುದಿಲ್ಲ. ಈ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿರುವುದಾಗಲೀ, ಬಿಲ್ಲುಗಳನ್ನು ಪಾವತಿಸುವುದಾಗಲೀ ತಮ್ಮ ಅವಧಿಯಲ್ಲಿ ನಡೆದಿರುವುದಿಲ್ಲವೆಂದು, ಕಾಮಗಾರಿ ಪೂರ್ಣಗೊಂಡ 4 ವರ್ಷಗಳ ನಂತರ ಕಾಮಗಾರಿಯ ಗುಣಮಟ್ಟದ ಪರಿಶೀಲನೆ ನಡೆಸಿರುವುದು ಸಮಂಜಸ ಕ್ರಮವಾಗಿರುವುದಿಲ್ಲವೆಂದು, ಈ ಕಾಮಗಾರಿಯನ್ನು ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ಅಧಿಕಾರಿಯವರು ದಿನಾಂಕ : 26.02.2013ರಂದು ಪರಿವೀಕ್ಷಣೆ ನಡೆಸಿದ ಸಂದರ್ಭದಲ್ಲಿ ತಮ್ಮ ಮೇಲೆ ಐಆವುದೇ ಆರೋಪವನ್ನು ಮಾಡಿರುವುದಿಲ್ಲ. ಕಾಮಗಾರಿಯನ್ನು 2009ನೇ ಸಾಲಿನಲ್ಲಿಯೇ ಪೂರ್ಣಗೊಳಿಸಿ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರಿಸಿದ ಕಟ್ಟಡವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಜವಾಬ್ದಾರಿಯು ಶಿಕ್ಷಣ ಇಲಾಖೆಗೆ ಸಂಬಂಧಿಸಿದ್ದಾಗಿರುತ್ತದೆ. ತಾವು ದಿನಾಂಕ: 03.11.2012ರಂದು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ ಕಚೇರಿಯ ಪ್ರಭಾರವನ್ನು ವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸದರಿ ಕಾಮಗಾರಿಯ ಬಗ್ಗೆ ಲೋಕಾಯುಕ್ತ ಸಂಸ್ಥೆಯು ಪರಿಶೀಲನೆ ನಡೆಸುತ್ತಿದ್ದ ಕಾರಣ ಸದರಿ ಶಾಲಾ ಕೊಠಡಿಗಳ ಕಟ್ಟಡವನ್ನು ದುರಸ್ಥಿಗೊಳಿಸಲು ಪ್ರಯತ್ನಿಸಿರುವುದಿಲ್ಲವೆಂದು, ಮಾನ್ಯ ಉಪಲೋಕಾಯುಕ್ತರು ಹಾಗೂ ತನಿಖಾಧಿಕಾರಿಒಯವರು ಸೂಚಿಸಿದಂತೆ ಸದರಿ ಕಟ್ಟಡವನ್ನು ದುರಸ್ಥಿಗೊಳಿಸಲಾಗಿದೆಂದು, ಇದರಲ್ಲಿ ತಮ್ಮಿಂದ ಯಾವುದೇ ಲೋಪವಾಗಿರುವುದಿಲ್ಲವೆಂದು. ಕಾಮಗಾರಿಯನ್ನು ಕಳಪೆಯಾಗಿ ಅನುಷ್ಠಾನಗೊಳಿಸಿರುವ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳದೆ, ಕಾಮಗಾರಿಗೆ ಸಂಬಂಧವಿಲ್ಲದ ತಮ್ಮನ್ನು ಹೊಣೆಗಾರರನ್ನಾಗಿ ಮಾಡಲಾಗಿದೆಂದು ತಿಳಿಸುತ್ತಾ ತಮ್ಮ ವಿರುದ್ಧದ ಶಿಸ್ತು ಕ್ರಮವನ್ನು ಕೈ ಬಿಡುವಂತೆ ಕೋರಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಆರೋಪಿತರ ಲಿಖಿತ ವಿವರಣೆ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಸದರಿ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣಾಧಿಕಾರಿಯವರು ಇಬ್ಬರ ಸಾಕ್ಷಿ ಹಾಗೂ 19 ದಾಖಲೆಗಳನ್ನು ಇಲಾಖಾ ವಿಚಾರಣೆಯಲ್ಲಿ ಪರಿಶೀಲಿಸಿ ನಿರ್ಣಯಿಸಿರುತ್ತಾರೆ. ಪ್ರಕರಣದಲ್ಲಿನ ಆಪಾದಿತ ಅಧಿಕಾರಿ / ನೌಕರರ ಪೈಕಿ ಶ್ರೀ ಬಸಯ್ಯ ಹಿರೇಮಠ ಇವರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಯಾದಗಿರಿ ಜಿಲ್ಲೆ ಕೆಂಭಾವಿ ಗ್ರಾಮದಲ್ಲಿ ನಬಾರ್ಡ್ ಯೋಜನೆಯಡಿ ಕೈಗೊಳ್ಳಲಾದ ಸರ್ಕಾರಿ ಪ್ರೌಢಶಾಲೆಯ 5 ಕೊಠಡಿಗಳ ಕಾಮಗಾರಿಯನ್ನು ಗುತ್ತಿಗೆದಾರರು ಕಳಪೆ ಮಟ್ಟದ ವಸ್ತುಗಳನ್ನು ಬಳಸಿ ನಿರ್ವಹಿಸಿದ್ದು, ಈ ಕಾಮಗಾರಿ ನಿರ್ವಹಿಸಿದ 5 ವರ್ಷದ ಒಳಗೆ ಶಾಲಾ ಕೊಠಡಿಗಳ ಗೋಡೆಗಳು ಬಿರುಕು ಬಿಟ್ಟಿದ್ದರೂ, ಮೇಲ್ಛಾವಣಿ ಸೋರುತ್ತಿದ್ದರೂ ಗುತ್ತಿಗೆದಾರರ ಮೇಲೆ ಕ್ರಮಕೈಗೊಳ್ಳದೆ, ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ

ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಳ್ಳಲಾಗಿದೆಂದು ಆರೋಪಿಸಲಾಗಿದೆ. ಸದರಿ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ ಇಬ್ಬರು ಸಾಕ್ಷಿ ಹಾಗೂ 19 ದಾಖಲೆಗಳನ್ನು ಹಾಗೂ ಆಪಾದಿತರ ಪರವಾಗಿ ಆಪಾದಿತರ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ, ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಪ್ರಕರಣದಲ್ಲಿನ ಆರೋಪಿತರುಗಳ ವಿರುದ್ಧದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸ್ಪಷ್ಟವಾಗಿ ಸಾಬೀತಾಗಿದೆಂದು ವಿಚಾರಣಾಧಿಕಾರಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಲೋಕಾಯುಕ್ತ ಸಂಸ್ಥೆಯು ಸದರಿ ಕಾಮಗಾರಿಯ ಸ್ಥಳಪರಿವೀಕ್ಷಣೆ ಕೈಗೊಳ್ಳುವ 3 ತಿಂಗಳ ಮುಂಚಿತವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ಪ್ರಶ್ನಿತ ಕಾಮಗಾರಿಯನ್ನು ಲೋಕಾಯುಕ್ತ ಸಂಸ್ಥೆ ಸ್ಥಳಪರಿವೀಕ್ಷಣೆ ಕೈಗೊಂಡಿರುವ ವಿಷಯವು ಸದರಿಯವರಿಗೆ ತಿಳಿದಿದ್ದರೂ ಸಹ ಅವರು ಪ್ರಶ್ನಿತ ಶಾಲಾ ಕೊಠಡಿಗಳಿಗೆ ವಾಟರ್ ಪ್ರೂಫಿಂಗ್ ಕೈಗೊಂಡಿರುವುದು, ಇದಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಪಡೆಯದೇ ಶಾಲೆಯಲ್ಲಿ ಬೆಳಕು ಇಲ್ಲದಿದ್ದರೂ ಸಹ ವಾಟರ್ ಪ್ರೂಫಿಂಗ್ ಕೈಗೊಳ್ಳುವ ಮೂಲಕ ಲೋಕಾಯುಕ್ತ ಸಂಸ್ಥೆಯ ತನಿಖೆಗೆ ಉದ್ದೇಶ ಪೂರ್ವಕವಾಗಿ ತೊಂದರೆಯುಂಟು ಮಾಡಿ ದುರ್ನಡತೆ ಎಸಗಿರುವ ಆರೋಪವು ಸಾಬೀತಾಗಿರುವುದು ಸ್ಪಷ್ಟವಾಗಿರುತ್ತದೆ.

ಆದ್ದರಿಂದ, ಸದರಿ ಆಪಾದಿತ ಅಧಿಕಾರಿ ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿವರಣೆಯನ್ನು ಪರಿಗಣಿಸಲು ಸಮರ್ಥನೀಯವಾದ ಕಾರಣಗಳು ಹಾಗೂ ಯಾವುದೇ ಪರಿಗಣನಾರ್ಹವಾದ ಅಂಶಗಳು ಕಂಡುಬರುವುದಿಲ್ಲವಾದ ಕಾರಣ, ಸದರಿಯವರ ವಿರುದ್ಧದ ಆರೋಪವು ಲೋಕಾಯುಕ್ತ ಕಚೇರಿಯು ಕೈಗೊಂಡ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರಿಗೆ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2017, ಬೆಂಗಳೂರು, ದಿನಾಂಕ: 16.07.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಬಸಯ್ಯ ಹಿರೇಮಠ, ಅಂದಿನ ಸಹಾಯಕ ಕಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಸುರಪುರ ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಚಿತ್ತಾಪುರ ಇವರ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8 (iva) ರ ಅನುಸಾರ ಸದರಿಯವರು ಪಡೆಯುತ್ತಿರುವ

ವೇತನದಲ್ಲಿ ಎರಡು ಹಂತಗಳನ್ನು ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವ ಹಾಗೂ 2 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

06/12/2018

(ಎಸ್.ರಂಗನಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ).
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು. (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು. ಕರ್ನಾಟಕ ಲೋಕಾಯುಕ್ತ ಕಚೇರಿ. ಎಂ.ಎಸ್.ಬಿಲ್ಡಿಂಗ್. ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯತ್. ಯಾದಗಿರಿ ಮತ್ತು ಕಲಬುರಗಿ- (ನೋಂದಾಯಿತ ಅಂಚೆ ಮುಖಾಂತರ).
5. ಮುಖ್ಯ ಇಂಜಿನಿಯರ್. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಬೆಂಗಳೂರು.
6. ಮುಖ್ಯ ಇಂಜಿನಿಯರ್. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ. ಬೆಂಗಳೂರು
7. ಮುಖ್ಯ ಇಂಜಿನಿಯರ್. ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್. ಬೆಂಗಳೂರು.
8. ಕಾರ್ಯಪಾಲಕ ಇಂಜಿನಿಯರ್. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ. ಯಾದಗಿರಿ. (ನೋಂದಾಯಿತ ಅಂಚೆ ಮುಖಾಂತರ).
9. ಸಹಾಯಕ ಕಾರ್ಯಪಾಲಕ ಇಂಜಿನಿಯರ್. ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ. ಸುರಪುರ - (ನೋಂದಾಯಿತ ಅಂಚೆ ಮುಖಾಂತರ).
10. ಶ್ರೀ ಬಸಯ್ಯ ಹಿರೇಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ. ಚಿತ್ತಾಪುರ - (ನೋಂದಾಯಿತ ಅಂಚೆ ಮುಖಾಂತರ).
11. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ & ಸಿ).
12. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
13. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
14. ಮಾಹಿತಿ ಕೇಂದ್ರ : ಹೆಚ್ಚುವರಿ ಪ್ರತಿ:ರಕ್ಷಾ ಕಡತ : ಕಂಪ್ಯೂಟರ್ ಸೆಲ್.